## ಕಳೆದ ಸಂಚಿಕೆಯಲ್ಲಿ



ಇದ್ದಕ್ಕಿದ್ದಂತೆ ಕದ ಬಡಿದ ಮೈದುನನನ್ನು ಕಂಡು ಸೀತಾಲಕ್ಷ್ಮಿಗೆ ಆಶ್ಚರ್ಯವಾಯಿತು. ವೆಂಕಟರಾಮು ವರ್ತನೆಯಲ್ಲಿ ಕಿಂಚಿತ್ತೂ ಬದಲಾಗಿರಲಿಲ್ಲ. ಗೃಹಪ್ರವೇಶದ ವಿಷಯ ತಿಳಿಸಿ, ಅತ್ತಿಗೆ ಆಶೀರ್ವಾದ ಪಡೆದುಕೊಂಡು ಹೋಗಲು ಕಳ್ಳತನದಲ್ಲಿ ಬಂದಿದ್ದ. ವೆಂಕಟರಾಮುವಿನ ಒಳ್ಳೆಯತನ ಗಂಡನಿಗೂ ಬರಬಾರದೇ ಎಂದು ಸೀತಾಲಕ್ಷ್ಮಿ ಹಲುಬಿದಳು. ಆದರೆ, ಅಣ್ಣ–ತಮ್ಮನ ನಡುವಿನ ವೈಮನಸ್ಸು ಹೆಚ್ಚುತ್ತಲೇ ಹೋಯಿತು. ತಮ್ಮನ ಉಪ್ಪರಿಗೆ ಮನೆ ಅಣ್ಣನ ಅಸೂಯೆಯನ್ನು ಮತ್ತಷ್ಟು ಹೆಚ್ಚಿಸಿತು. ಊರಿನಲ್ಲಿನ ಚಾಡಿಕೋರರು ಎರಡು ಮನೆಗಳ ನಡುವಿನ ಮುನಿಸನ್ನು ಮತ್ತಷ್ಟು ಹೆಚ್ಚಿಸಿದರು. ಶಿವರಾಮನ ಹಟಮಾರಿತನ ಹೆಚ್ಚುತ್ತಲೇ ಹೋಯಿತು. ಇದೇ ಸಮಯದಲ್ಲಿ, ಸೀತಾಲಕ್ಷ್ಮಿಗೆ ಮತ್ತೊಬ್ಬ ಮಗ ಹುಟ್ಟಿದ. ವೆಂಕಟರಾಮುವಿಗೂ ಇಬ್ಬರು ಮಕ್ಕಳು. ಮಕ್ಕಳ ನಡುವೆಯೂ ಸ್ನೇಹ ಸಾಧ್ಯವಾಗದಂತೆ ಶಿವರಾಮ ಎಚ್ಚರ ವಹಿಸಿದ. ಹೀಗೇ ದಿನ ಕಳೆಯುತ್ತಿರುವಾಗ, ಒಂದು ಬೆಳಿಗ್ಗೆ ಶಿವರಾಮನ ಮನೆ ಎದುರಿನಲ್ಲಿ ಅವನ ತಾಯಿ ಮಲಗಿದ್ದಳು. ಅಮ್ಮ ಮನೆಗೆ ಹಿಂತಿರುಗಿದ್ದಳು. ತಮ್ಮನ ಬಗ್ಗೆ ಗೊಣಗುತ್ತಲೇ ಶಿವರಾಮ ಅಮ್ಮನನ್ನು ಮನೆ ತುಂಬಿಸಿಕೊಂಡಿದ್ದ.

ಹಿಡಿತ ಮಾಡದೆ ಬಡಿಸುತ್ತಿದ್ದಳು. ಮನಸ್ಸಿಗೆ ದೊರಕಿದ ನೆಮ್ಮದಿಯಿಂದಲೋ, ಮನೆಯವರ ಪ್ರೀತಿಯಿಂದಲೋ, ಪೌಷ್ಟಿಕ ಆಹಾರದಿಂದಲೋ ಜೀವಚ್ಛವದಂತಾಗಿದ್ದ ವೆಂಕಮ್ಮ ಒನಕೆ ಚಿಗುರಿದಂತೆ ಚಿಗಿತುಕೊಂಡು ಮನೆಯೊಳಗೆ ಓಡಾಡುವಂತಾದರು. ಶಿವರಾಮ ಕೂಡಾ ಮೃದುವಾಗತೊಡಗಿದ್ದ. 'ಕಾಫಿ ಕುಡಿದ್ಯನೇ?', 'ತಿಂಡಿ ತಿಂದ್ಯನೇ?' ಎಂದು ಅಪರೂಪಕ್ಕಾದರೂ ವಿಚಾರಿಸಿಕೊಳ್ಳುತ್ತಿದ್ದ. ಅವರಿಗೋಸ್ಕರವೆಂದೇ ಒಂದು ಪ್ರತ್ಯೇಕ ಕಕ್ಕಸುಮನೆ ಕಟ್ಟಿಸಿ, 'ನಿಂಗ್ ನಿಂಗೇ ಅಮ್ಮಾ. ಮತ್ತ್ಯಾರೂ ಒಳಗೆ ಹೋಗಿ ಕೂರೋ ಹಾಗಿಲ್ಲ' ಎಂದು ತಮಾಷಿ ಮಾಡಿದ್ದ. ವೆಂಕಮ್ಮನಿಗೆಂದು ಎರಡು ಕೆಂಪು ಸೀರೆಗಳು ಪೇಟೆಯಿಂದ ಮನೆಗೆ ಬಂದಿದ್ದುವು. ಅವರು ಉಟ್ಟು ಬಿಟ್ಟ ಬಟ್ಟೆಗಳನ್ನು ಮನೆಯವರ ಬಟ್ಟೆಗಳ ಜೊತೆ ಒಗೆದು ಹಾಕುತ್ತಿದ್ದಳು ಕೆಲಸದ ಹೆಂಗಸು.

ತಾನು ಕಿರಿಮಗನ ಬೆನ್ನು ಬಿದ್ದು ಹೋಗಿ ತಪ್ಪು ಮಾಡಿಬಿಟ್ಟೆ ಎಂದು ಅಮ್ಮನಿಗೆ ಈಗಾದರೂ ಪಶ್ಚಾತ್ತಾಪವಾಗಲಿ ಎಂದಿರಬಹುದು, ಅಲ್ಲಿದ್ದಾಗ ಇನ್ನೇನು ಭಾಳ ದಿನ ಬಾಕಿ ಇಲ್ಲ ಅನಿಸುವಂತಿದ್ದ ವೆಂಕಮ್ಮ ಇಲ್ಲಿಗೆ ಬಂದ ಮೇಲೆ ಹೇಗೆ ಚಿಗುರಿಕೊಂಡರು ಎನ್ನುವ ವರ್ತಮಾನ ತಮ್ಮನ ಕಿವಿಯವರೆಗೆ ಹೋಗಿ ತಲುಪಲಿ ಎನ್ನುವ ಧೋರಣೆ ಇರಬಹುದು, ಶಿವರಾಮ ಅಮ್ಮನಿಗೋಸ್ಕರ ಬೇರೇನೂ ಕಡಿದು ಕಟ್ಟೆ ಹಾಕದಿದ್ದರೂ ಅವರ ಮನಸ್ಸಿಗೆ ನೋವಾಗದಂತೆ ನಡೆದುಕೊಳ್ಳುತ್ತಿದ್ದ. ಗೌರ್ಮೆಂಟ್ ಬಸ್ಸು ಎಂದು ಪಡ್ಡೆಗಳಿಂದ ಲೇವಡಿಗೆ ಒಳಗಾಗುತ್ತಿದ್ದ, ಎಲ್ಲಿಗಾದರೂ ಹೊರಟಾಗ ಎದುರಿಗೆ ಕಂಡರೆ ಅಪಶಕುನ ಅನ್ನಿಸಿಕೊಳ್ಳುತ್ತಿದ್ದ, ಒಂದು ಚಿಟಿಕೆ ಪ್ರೀತಿಗಾಗಿ ಜೀವ ಪಣಕ್ಕಿಟ್ಟು ದುಡಿಯುತ್ತಿದ್ದ, ಮಡಿಯಾದ ಹೆಂಗಸರದ್ದು ಒಬ್ಬೊಬ್ಬರದ್ದೂ ಒಂದೊಂದು ಕಥೆ, ವ್ಯಥೆ. ಇದ್ದ ಬದುಕಲ್ಲ, ಸತ್ತ ಸಾವಲ್ಲ. ಅಪವಾದಗಳು ಬೆರಳೆಣಿಕೆಯಷ್ಟು ಇರಬಹುದು, ಇಲ್ಲದೆ ಇರಲೂಬಹುದು. ಕೊನೆಗಾಲಕ್ಕೆ ಆಸರೆಗಿರಲಿ ಎಂದು ಮಕ್ಕಳ ಕೈಗೆ ಮೊದಲೇ ಒಪ್ಪಿಸದೆ ಸರ್ಪನ ಹಾಂವಿಂತೆ ಕಾಪಿಟ್ಟುಕೊಂಡವರ ಸ್ತ್ರೀಧನವನ್ನು ಹೆತ್ತ ಮಕ್ಕಳೇ ಹೊಡೆದು, ಬಡಿದು ಅಪಹರಿಸುತ್ತಿದ್ದುದಿತ್ತು. ಕದ್ದು ಹಾರಿಸುವುದಕ್ಕೆ ಉದಾಹರಣೆ ಶಿವರಾಮನದೇ ಉಂಟಲ್ಲ? ಮಡಿ ಹೆಂಗಸರಿಗೆ ಅಂಟಿಕೊಂಡಿದ್ದ ಮತ್ತೊಂದು ಕಳಂಕ ಮದ್ದು ಹಾಕುವುದು. ಇದಕ್ಕೆ ಯಾವ ಸಾಕ್ಷಿ, ಪುರಾವೆ ಇಲ್ಲದಿದ್ದರೂ ಜನರ ಮನಸ್ಸಿನಲ್ಲಿ ಗಟ್ಟಿ ನಂಬುಗೆಯಾಗಿ ಬೆಳೆದುಕೊಂಡು ಬಂದಿದ್ದು ಆಶ್ಚರ್ಯವಾದರೂ ನಿಜ. ಕಗ್ಗಾನುಕಾಡಲ್ಲಿ ದುರುದುಂಡಗೆ ಕೂತು ತಯಾರಿಸುವ ಈ ಮದ್ದಿಗೂ, ಅಸಹಾಯಕ ವಿಧವೆಗೂ ಹೇಗೋ ಸಂಬಂಧ ಜೋಡಿಸಲ್ಪಟ್ಟಿತ್ತು. ಸತ್ತ ಓತೀಕೇತವನ್ನು ತಲೆಕೆಳಗೆ ನೇತು ಹಾಕಿ ಅದರ ಬಾಯಿಂದ ಒಸರುವ ದ್ರವಕ್ಕೆ ಇನ್ನ್ಯಾವುದೋ ಸೊಪ್ಪುಸದೆ ಬೆರೆಸಿ. ನುಣ್ಣಗೆ ಅರೆದು, ಸಣ್ಣ ಗುಳಿಗೆ ಮಾಡಿ ಬಿಸಿಲಿನಲ್ಲಿ ಒಣಗಿಸಿಟ್ಟುಕೊಳ್ಳುತ್ತಾರಂತೆ. ಸಾವಿರ ಜನರ ಸಮಾರಾಧನೆ ಇರಲಿ, ಯಾರ ಎಲೆಗೆ ಈ ಮದ್ದು ಬೀಳಬೇಕೆಂದು ನಿಶ್ಚಯಿಸಿರುತ್ತಾರೋ ಅವರ ಎಲೆಗೇ ಬೀಳುತ್ತದೆಯಂತೆ. ಮಲೆನಾಡ ಭಾಗದಲ್ಲಿ ಇದರ ಬಗ್ಗೆ ಒಂದಾನೊಂದು ಕಾಲದಲ್ಲಿ ಬೇಕಾದಷ್ಟು ಹೇಳಿಕೆಗಳಿದ್ದುವು. ಊಟಕ್ಕೆ ಕೂತಾಗ ಮೊದಲು ಮುಂಚೆ ಎಲೆ ತುದಿಯಲ್ಲಿ ಬಡಿಸಿದ ಉಪ್ಪನ್ನು ತಿಂದರೆ ಹಾಕಿದ ಮದ್ದು ನಾಟುವುದಿಲ್ಲವಂತೆ. ಊಟದ ನಂತರ ಒಂದು ಏಲಕ್ಕಿಕಾಯಿ ಜಗಿದು ತಿನ್ನುವುದು ಅಥವಾ ಬಡಿಸಿದ ವ್ಯಂಜನಗಳನ್ನು ಪೂರಾ ಬಳಿದು ತಿನ್ನದೆ ಎಲೆಯಲ್ಲಿ ಚೂರುಚೂರೇ ಉಳಿಸುವುದು ಕೂಡಾ ಮದ್ದು ನಾಟದಿರಲು ಮಾಡುವ ನಿವಾರಣಾ ಕ್ರಮಗಳಂತೆ. ಮದ್ದು ಹಾಕಿದವರಿಗೆ ಅದು ತಿಂದವರ ಹೊಟ್ಟೆಗೆ ಹೋಯಿತೋ, ಇಲ್ಲವೋ ಎನ್ನುವ ಅನುಮಾನ ಬಂದರೆ ಸಾಕು, ಹಾಕಿದ ಮದ್ದು ನಾಟುವುದಿಲ್ಲ ಎನ್ನುವುದು ಹೇಳಿಕೆ ಮಾತು. ತಿಂದನ್ನ ಅರಗದೆ ಯಾರಾದರೂ ಬಡಕಟೆಯಾಗುತ್ತಾ ಬಂದರೆ ಮನೆಯವರಿಗೆ ಮೊದಲು ಬರುವ ಅನುಮಾನ ಹೊಟ್ಟೆಗೆ ಮದ್ದು ಬಿದ್ದಿದೆಯಾ ಅಂತ. ಇದನ್ನು ಪಕ್ಕಾ ಮಾಡಿಕೊಳ್ಳಲು ಕೆಲವೊಂದು ಪರೀಕ್ಷಾ ಕ್ರಮಗಳಿವೆ.

ಒಂದು ಉದಾಹರಣೆಯೆಂದರೆ, ಹುರುಳಿ ಕಾಳನ್ನು ಬಾಯಲ್ಲಿಟ್ಟುಕೊಂಡರೆ ಎಷ್ಟು ಕಾಳು ಉಬ್ಬಿರುತ್ತದೆಯೋ ಹೊಟ್ಟೆಗೆ ಮದ್ದು ಬಿದ್ದು ಅಷ್ಟು ತಿಂಗಳಾಗಿದೆ ಎನ್ನುವ ನಂಬಿಕೆ. ಮದ್ದಿಗೆ ಔಸ್ದಿ ಕೊಡಿಸುವ ಕೆಲಸ ಗುಟ್ಟುಗುಟ್ಟಾಗಿ ನಡೆಯಬೇಕು. ಮದ್ದು ಹಾಕಿದವರಿಗೆ ಈ ವಿಷಯವೇನಾದರೂ ಗೊತ್ತಾಗಿ ಅವರು ಮನೆಯ ಮೂಲೆಯಲ್ಲಿರುವ ಹಿಡಿಕುಂಟೆಯನ್ನು ತಲೆಕೆಳಗಾಗಿ ಇಟ್ಟರೆ, ಅಥವಾ ಉಟ್ಟ ಸೀರೆಯನ್ನು ತಿರುಗಾಮುರುಗಾ ಮಾಡಿ ಉಟ್ಟರೆ ಮದ್ದು ಬಿದ್ದವರಿಗೆ ಯಾವ ಔಷಧಿಯೂ ನಾಟುವುದಿಲ್ಲ. ಯಾವುದೋ ಹಸಿರುಸೊಪ್ಪಿನ ರಸ ಕುಡಿಸಿ ಮೊದಲೇ ಅರೆಜೀವವಾಗಿರುವ ಪ್ರಾಣಿ ವಾಂತಿ ಮಾಡಿ ಮಾಡಿ ಪ್ರಜ್ಞೆ ತಪ್ಪುವಂತಾದಾಗ ಔಷಧಿ ಕೊಟ್ಟವರು ಆ ವಾಂತಿಯನ್ನು ಕಡ್ಡಿಯಿಂದ ಕೆದಕಿ, 'ಇಕಳಿ, ಕೇಸರಿಬಾತಿನಲ್ಲಿ ಹಾಕಿದ್ದು', 'ಇಕಳಿ ಕಾಫಿಯಲ್ಲಿ ಹಾಕಿ ಕೊಟ್ಟಿದ್ದು' ಎಂದು ಕರಾರುವಾಕ್ಕಾಗಿ ಹೇಳಿಬಿಡುತ್ತಾರೆ. ಯಾವುದರಲ್ಲಿ ಮದ್ದು ಹಾಕಿ ಕೊಟ್ಟಿರುತ್ತಾರೋ ಅದು ಜಠರದಲ್ಲಿ ಜೀರ್ಣವಾಗದೆ ಮದ್ದಿನೊಡನೆ ಹಾಗೇ ಉಳಿದುಕೊಂಡಿರುತ್ತದೆಯಂತೆ. ಒಂದೊಮ್ಮೆ ಈ ಮದ್ದಿಗೆ ಕೂದಲು ಹುಟ್ಟಿಕೊಂಡಿತ್ತು ಅಂದರೆ ಮತ್ತೆ ಯಾವ ಔಷಧಿಯೂ ನಾಟುವುದಿಲ್ಲವಂತೆ. ಕೆಲವೊಂದು ಮನೆಗಳಲ್ಲಿನ ಮಡಿ ಹೆಂಗಸರಿಗೆ ಈ ಮದ್ದು ಹಾಕುವ ಅಪವಾದ ಅಂಟಿಕೊಂಡಿರುತ್ತಿತ್ತು. ಅನಿವಾರ್ಯವಾಗಿ ಆ ಮನೆಯಲ್ಲಿ ಏನಾದರೂ ತಿಂದರೆ, ಕುಡಿದರೆ ಪೂರ್ತಿ ತಿನ್ನದೆ, ಕುಡಿಯದೆ ಒಂದಷ್ಟನ್ನು ಹಾಗೇ ಉಳಿಸಿ ಮದ್ದು ಹಾಕಿದವರಿಗೆ ಅದು ಹೊಟ್ಟೆಗೆ ಹೋಯ್ತೋ ಇಲ್ಲವೋ ಎಂದು ಅನುಮಾನ ಬರುವಂತೆ ನಡೆದುಕೊಳ್ಳುವ ಕ್ರಮ ಚಾಲ್ತಿಯಲ್ಲಿತ್ತು. ಕಾಫಿಯಂತಹ ಪಾನೀಯವಾದರೆ ಲೋಟದ ಬುಡದಲ್ಲಿ ಒಂದು ಗುಟುಕು ಉಳಿಸುವುದು. ಸೀತಾಲಕ್ಷ್ಮಿಯ ತೌರಿನಲ್ಲಿ ಮಾತ್ರವಲ್ಲ, ಗಂಡನ ಮನೆಯಲ್ಲೂ ಇಂಥ ಮಾತುಗಳು, ಯಾರು ಮದ್ದು ಹಾಕುತ್ತಾರೆನ್ನುವ ವದಂತಿಗಳು ಮಾತಿನ ನಡುವೆ ರಂಗುರಂಗಾಗಿ ಬಿಚ್ಚಿಕೊಳ್ಳುತ್ತಿದ್ದುವು. 'ಮದ್ದಾ ಮತ್ತೆಂತದು? ಕಗ್ಗಾನುಕಾಡಿಗೆ ಹೆಣ್ಣು ಹೆಂಗಸ್ರು ಒಬ್ಬೊಬ್ರೇ ಹೋಗೋಕೆ ಧೈರ್ಯ ಬ್ಯಾಡ್ವಾ? ದುರುದುಂಡಗೆ ಕೂತು ಮದ್ದು ಅರೆಯೋದು ಅಂದ್ರೆ ತಮಾಷೀನಾ? ಹೋಗಲಿ, ಸತ್ತ ಓತೀಕೇತ ಬೇಕು ಅಂದಕೂಡ್ಲೆ ಇವರ ಕೈಗೆ ಸಿಕ್ಕಿಬಿಡುತ್ತಾ? ಇವರೇ ಬಡಿದು ಸಾಯಿಸಲು ಅದು ಕೈಗೆ ಸಿಗುತ್ತಾ? ಅದರ ಬಾಯಿಂದ ರಸ ಬೀಳೋವರೆಗೆ ಕಾದು ಕೂತಿರೋಕಾಗುತ್ತಾ?' ಅಮ್ಮನ ಜೊತೆ ವಾದ ಹೂಡಿದ್ದಿದೆ ಸೀತಾಲಕ್ಷ್ಮಿ.

'ನಿಂಗೊತ್ತಿಲ್ಲ ಕಣೆ. ಕಾನಿಗೆ ಬೇಟೆಗೆ ಹೋದ ವಿಲಾಯಿತಿಯವನೊಬ್ಬ ಇಂಥ ಹೆಂಗಸನ್ನ ನೋಡಿ ಬಂದೂಕಿಂದ ಗುಂಡು ಹಾರಿಸಿ ಕೊಂದುಬಿಟ್ಟಿದ್ನಂತೆ...' ಅಮ್ಮ ಉತ್ಸುಕತೆಯಿಂದ